VIJAYAKUMAR KANNUR
Digitally signed by VIJAYAKUMAR KANNUR
Date: 2026.06.03 10:29:22 +0530



**ಪ್ರಧನಾ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 02.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1, 3, 4 ರವರ ಪರ ಶ್ರೀ ಕೆ ಕೆ ಜಿ ವಕೀಲರಿಂದ**

ಈ ದಾವೆಯನ್ನು ನನ್ನ ಸಹೋದರನ ಹೆಂಡತಿ ಮತ್ತು ಮಕ್ಕಳ ವಿರುದ್ದ ದಾಖಲು ಮಾಡಿರುವೆನು. ದಾವಾ ಆಸ್ತಿಯ ಸರ್ವೇ ನಂಬರ್ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 14 ಎಕರೆ 30 ಗುಂಟೆ ಜಮೀನು ಇರುವುದು. ಈ ಜಮೀನಿನಲ್ಲಿ ಎರಡು ಭಾಗವಾಗಿರುವುದು ಎಂದರೆ ಸರಿ. ಈ ಜಮೀನಿನಲ್ಲಿ ಪೂರ್ವಕ್ಕೆ ಪ್ರತಿವಾದಿಯರ ಜಮೀನು, ಪಶ್ಚಿಮಕ್ಕೆ ನನ್ನ ಜಮೀನು ಇರುವುದು ಎಂದರೆ ಸರಿ. ಪಶ್ಚಿಮಕ್ಕೆ ಬಂದಿರುವ ಜಮೀನಿಗೆ ದಾರಿ ಇರುವುದು, ಪೂರ್ವದ ಜಮೀನಿಗೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿ. ಪಶ್ಚಿಮದ ಜಮೀನಿನಲ್ಲಿ ಖರಾಬು ಜಮೀನು ಇರುವುದು, ಪೂರ್ವದ ಜಮೀನಿನಲ್ಲಿ ಯಾವುದೇ ಖರಾಬು ಜಮೀನು ಇರುವುದಿಲ್ಲ ಎಂದರೆ ಸರಿ ,

2. ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬೇರೆ ನ್ಯಾಯಾಲಯದಲ್ಲಿ ದಾವೆ ವಿಚಾರಣೆಯ ಹಂತದಲ್ಲಿ ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಒಬ್ಬಳು ಮಗಳು ಇರುವಳು. ಪ್ರತಿವಾದಿ 1 ವಿನ ಮೃತ ಗಂಡನಿಗೆ ಭೀಮವ್ವ ಎಂಬ ಅಕ್ಕಳಿರುವಳು, ಅವಳು ಈಗ ಮೃತ ಪಟ್ಟಿರುವಳು. ಭೀಮವ್ವಳಿಗೆ ನಾನು ಮತ್ತು ಪ್ರತಿವಾದಿಯರು ಕೂಡಿಕೊಂಡು ರೂ. 20 ಲಕ್ಷ ಹಣ ನೀಡಿದ್ದೇವೆ ಎಂದರೆ ಸರಿ. ಭೀಮವ್ವ ಈ ದಾವಾ ಆಸ್ತಿಯಲ್ಲಿನ ತನ್ನ ಹಕ್ಕನ್ನು ಬಿಟ್ಟುಕೊಟ್ಟಿರುವಳು ಎಂದರೆ ಸರಿ. ಶಿವಪ್ಪ ತಮ್ಮಣಗೌಡ ಎಂಬುವವನ ಕಡೆಯಿಂದ ರೂ. 20 ಲಕ್ಷ ಹಣ ಪಡೆದುಕೊಂಡು ಭೀಮವ್ವಳಿಗೆ ನೀಡಿರುವನು ಎಂದರೆ ಸರಿಯಲ್ಲ. ಆತ ನನ್ನ ಕಡೆಯಿಂದ ರೂ. 15 ಲಕ್ಷ ಹಾಗೂ ತಾನು ರೂ. 5 ಲಕ್ಷ ಹಣ ಸಂಗ್ರಹಿಸಿ ಈ ರೂ. 20 ಲಕ್ಷ ಹಣ ನೀಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಹಿರಿಯರು ನನಗೆ ಯಾವುದೇ ಮಕ್ಕಳು ಇರುವುದಿಲ್ಲ ಆ ಕಾರಣಕ್ಕೆ ರೂ. 15 ಲಕ್ಷ ಹಾಗೂ ಮೃತ ಶಿವಪ್ಪನಿಗೆ ಹೆಣ್ಣು ಮಕ್ಕಳು ಇರುವುದರಿಂದ ಆ ಕಾರಣಕ್ಕೆ ಆತನಿಗೆ ರೂ. 5 ಲಕ್ಷ ಹಣ ನೀಡುವಂತೆ ಹೇಳಿದ್ದರು ಎಂದರೆ

ಸರಿಯಲ್ಲ. ಈ ಹಕ್ಕು ಬಿಟ್ಟು ಕೊಡುವ ಸಮಯದಲ್ಲಿ ದಾವಾ ಜಮೀನಿನ ಮೇಲೆ ಸೊಸೈಟಿಯ ಭೋಜಾವನ್ನು ಮೃತ ಶಿವಪ್ಪನೇ ಮಾಡಿರುವನು ಎಂದರೆ ಸರಿ. ಈ ಸಾಲವನ್ನು ಆತನೇ ತೆಗೆದುಕೊಂಡಿರುವುದರಿಂದ ಆತನೆ ಮರುಸಂದಾಯ ಮಾಡಿರುವನು. ಈ ಸಾಲವನ್ನು ನಾವು ಎಲ್ಲರೂ ಕೂಡಿಯೇ ಇದ್ದಾಗ ಪಡೆದುಕೊಂಡಿದ್ದೇವು ಎಂದರೆ ಸರಿ. ನಂತರ ADLR Mudhol ರವರಿಗೆ ಒಂದು ಅರ್ಜಿಯನ್ನು ಸಲ್ಲಿಸಿ ಈ ದಾವಾ ಜಮೀನನ್ನು ಅಳತೆ ಮಾಡಿಕೊಡುವಂತೆ ಕೋರಿಕೊಂಡಿದ್ದೇವು ಎಂದರೆ ಸರಿ. ADLR ಮುಧೋಳರವರಿಗೆ ಅಳತೆ ಮಾಡುವುದು ಬೇಡ ಅಂತ ಹೇಳಿ ಮರಳಿ ನಾನೇ ಕಳುಹಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ADLR ಮುಧೋಳರವರು ಹಿಂಬರಹವನ್ನು ನೀಡಿದ್ದು, ಆ ಹಿಂಬರಹದಲ್ಲಿ ಅರ್ಜಿದಾರಾಳ ನಾನು ತಕರಾರು ಮಾಡಿರುವುದಾಗಿ ಎಂದು ಅದರಲ್ಲಿ ಬರೆದಿರುವರು ಎಂದರೆ ಸರಿ.

3. ಪೂರ್ವ ದಿಕ್ಕಿನ ಜಮೀನಿನಲ್ಲಿ ಯಾವುದೇ ಖರಾಬು ಇರುವುದಿಲ್ಲ, ಪಶ್ಚಿಮ ದಿಕ್ಕಿನ ಜಮೀನಿನಲ್ಲಿ ಮಾತ್ರ ಖರಾಬು ಜಮೀನು ಇರುವುದು ಎಂದರೆ ಸರಿ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿ ಹಾಕಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1, 3 ಮತ್ತು 4 ರವರು ಈ ದಾವೆಯಲ್ಲಿ ಸಲ್ಲಿಸಿದ ಲಿಖಿತ ಪತ್ರದಲ್ಲಿನ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವಾ ಆಸ್ತಿಯ ಮೇಲೆ ನ್ಯಾಯಾಲಯದಲ್ಲಿ ಬೇರೆ ಪ್ರಕರಣಗಳು ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಹಿರಿಯರ ಸಮಕ್ಷಮದಲ್ಲಿ ಖರಾಬು ಜಮೀನು ಇದ್ದ ಬಗ್ಗೆ ಮಾತುಕತೆಯಾಗಿರುವುದು, ನಂತರವೇ ನಾನು ಈ ದಾವೆಯನ್ನು ದಾಖಲು ಮಾಡಿರುವೆನು. ADLR ಮುಧೋಳರವರು ಸಮನಾಗಿ ಹಿಸ್ಸೆ ಮಾಡಲು ಅಳತೆ ಮಾಡಲು ಬಂದಾಗ ನಾನು ತಕರಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಸರಿ ಸಮನಾದ ಹಿಸ್ಸೆ ಆಗಿದ್ದರೂ ಸಹಿತ ಈ ಪ್ರತಿವಾದಿಯರಿಗೆ ವಿನಾಃ ಕಾರಣ ತೊಂದರೆ ನೀಡುವ ಸಲುವಾಗಿ ನಾನು ಈ ಸುಳ್ಳು ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ